ಇ) ಈ ಜೋಡಿ ರಸ್ತೆ ಮಾಡುವ ಪ್ರಸ್ತಾವನೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಚಿಕ್ಕಮಗಳೂರುರವರಿಂದ ಸರ್ಕಾರದವರಿಗೆ ಬಂದಿದೆಯೇ

ಈ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸಧ್ಯದಲ್ಲಿ ಜೋಡಿ ರಸ್ತೆ ಮಾಡುವ ಉದ್ದೇಶವಿಲ್ಲ.

ಇ) ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ರವರಿಂದ ಪ್ರಸ್ತಾಪ ಸರ್ಕಾರಕ್ಕೆ ಬಂದಿರುತ್ತದೆ.

ಈ) ಈ ಕಾಮಗಾರಿಗೆ ಸುಮಾರು 75.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಬಗ್ಗೆ ವಿದ್ಯುತ್ ವ್ಯವಸ್ಥೆ

180 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಕ್ಕೆ ಹೊನ್ನಮ್ಮ ಹಳ್ಳದಿಂದ ಕುಡಿಯುವ ನೀರಿನ ವ್ಯವಸ್ಥೆಗೆ ವಿದ್ಯುತ್ ಕೊರತೆಯಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚಿಕ್ಕಮಗಳೂರಿನಿಂದ ಹೊನ್ನಮ್ಮ ಹಳ್ಳದವರೆಗೆ ಒಂದು ವಿದ್ಯುತ್ ಎಕ್ಸಪ್ರೆಸ್ ಲೈನ್ ಹಾಕಲು ಸರ್ಕಾರ ಅನುಮತಿ ನೀಡಿರುವುದೇ?

ಇ) ಈ ಎಕ್ಸ್‌ಪ್ರೆಸ್ ಲೈನಿಗೆ ವೆಚ್ಚವಾಗುವ ಹಣವೆಷ್ಟು ಹಾಗೂ ಈ ಎಕ್ಸಪ್ರೆಸ್ ಲೈನಿನ ಕೆಲಸ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬೇಸಿಗೆ ತಿಂಗಳುಗಳಲ್ಲಿ ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರನ್ನು ಪೂರೈಕೆ ಮಾಡುವ ಹೊನ್ನಮ್ಮ ಹಳ್ಳ ಯೋಜನೆಗೆ ವಿದ್ಯುತ್ ಪೂರೈಕೆಯಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿದ್ದಿತ್ತು. ಈಗ ವೋಲ್ಟೇಜಿನ ಸಮಸ್ಯೆ ಅಷ್ಟಾಗಿ ಇರುವುದಿಲ್ಲ. ಆದರೆ ವಿದ್ಯುತ್ ಲೈನು ಎಸ್ಟೇಟುಗಳ ಮೂಲಕ ಹಾದು ಹೋಗುವುದರಿಂದ, ಮಳೆಗಾಲದಲ್ಲಿ ವಿದ್ಯುತ್ ಅಡಚಣೆ ಉಂಟಾಗುವ ಸಂಭವ ವಿರುತ್ತದೆ.

ಆ) ಈಗಾಗಲೇ ಎಕ್ಸಪ್ರೆಸ್ ಲೈನಿನ ನಿರ್ಮಾಣಕ್ಕೆ ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯ ಕೋರಿಕೆ ಮೇರೆಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಟರ್ನ ಕೀ ಆಧಾರದ ಮೇಲೆ ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯವರೇ ಕಾರ್ಯನಿರ್ವಹಿಸಬೇಕಾಗುತ್ತದೆ.

ಇ) ಈ ಎಕ್ಸಪ್ರೆಸ್ ಲೈನಿನ ಅಂದಾಜು ವೆಚ್ಚ ರೂ. 18,16,816.00 ಈ ಎಕ್ಸ್‌ಪ್ರೆಸ್ ಲೈನಿನ ಕೆಲಸವನ್ನು ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯೇ ನಿರ್ವಹಿಸಬೇಕಾಗಿದೆ. ರೂ. 3,63,363.00 ಹಣವನ್ನು ಮೇಲ್ವಿಚಾರಣೆ ಶುಲ್ಕ (ಸೂರವಿಷನ್ ಚಾರ್ಜ)ದ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯು ಪಾವತಿ ಮಾಡಬೇಕಾಗುತ್ತದೆ.

ರಾಜ್ಯದಲ್ಲಿ ವಿದ್ಯುತ್ ಸೋರುವಿಕೆಯ ಬಗ್ಗೆ

181 - ಶ್ರೀ ಬಿ. ಬಸವಣ್ಣೆಪ್ಪ (ಹೊಳೆಹೊನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸೋರುವಿಕೆಯ ಪ್ರಮಾಣವು 1992-93, 93-94, 94-95 ಮತ್ತು 95 ಏಪ್ರಿಲ್‌ನಿಂದ ಜೂನರವರೆಗೆ ಎಷ್ಟಾಗಿದೆ?*

ಆ) *ಈ ವಿದ್ಯುತ್ ಪ್ರಮಾಣದ ಮೌಲ್ಯವೆಷ್ಟು?*

ಇ) *ಈ ವಿದ್ಯುತ್ ಪ್ರಮಾಣದಿಂದ ಉತ್ಪಾದನೆಯ ನಷ್ಟವೆಷ್ಟು (1992-93,1993-94, 1994-95 ಮತ್ತು 95 ಏಪ್ರಿಲ್‌ನಿಂದ ಜೂನ್ 1995ರವರೆಗೆ).*

ಈ) *ಈ ವಿದ್ಯುತ್ ಪ್ರಮಾಣದ ಕಡಿತದಿಂದ ಉದ್ಯೋಗದ ನಷ್ಟವೆಷ್ಟು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿ 1992-93 ಮತ್ತು 1993-94ರ ಸಾಲುಗಳಲ್ಲಿ ಉಂಟಾದ ವಿದ್ಯುತ್ ನಷ್ಟದ ಪ್ರಮಾಣ ಅನುಕ್ರಮವಾಗಿ 2982 ದಶಲಕ್ಷ ಯೂನಿಟ್ಟುಗಳು (ಶೇ. 18.7) ಮತ್ತು 3209 ದಶಲಕ್ಷ ಯೂನಿಟ್ಟುಗಳು (ಶೇ. 18.6) 1994-95ರ ಸಾಲಿನ ಲೆಕ್ಕ ಪತ್ರಗಳು ಇನ್ನೂ ಅಂತಿಮಗೊಂಡಿಲ್ಲವಾದ್ದರಿಂದ 1994-95ರ ಸಾಲಿನಲ್ಲಿ ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿ ಉಂಟಾದ ನಷ್ಟದ ಪ್ರಮಾಣವು ಪ್ರಸ್ತುತ ಲಭ್ಯವಿರುವುದಿಲ್ಲ.

ಪ್ರಸಕ್ತ ಆರ್ಥಿಕ ವರ್ಷವಾದ 1995-96 ಪೂರ್ಣಗೊಂಡ ನಂತರ ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ಲೆಕ್ಕಾಚಾರ ಮಾಡಲಾಗುವುದು. ಮಾಹೆಯಾನ್, ತ್ರೈಮಾಸಿಕ ಅಥವಾ ಅರ್ಧವಾರ್ಷಿಕದ ಅವಧಿಗಳಿಗೆ ಇದರ ಲೆಕ್ಕಾಚಾರವನ್ನು ಮಾಡುವುದಿಲ್ಲ.

ಆ) 1992-93 ಮತ್ತು 1993-94ರ ಸಾಲುಗಳಲ್ಲಿ ಉಂಟಾದ ವಿದ್ಯುತ್ ನಷ್ಟದ ಮೌಲ್ಯ ಅನುಕ್ರಮವಾಗಿ ಸುಮಾರು 27,837 ಮತ್ತು 34,256 ಲಕ್ಷ ರೂ.ಗಳೆಂದು ಅಂದಾಜು ಮಾಡಿದೆ.

ಇ) ವಿದ್ಯುತ್ ಪರಿಸರಣದಿಂದ ಉತ್ಪಾದನೆಗೆ ಏನು ನಷ್ಟ ಆಗುವುದಿಲ್ಲ.

ಈ) ಈ ವಿಷಯಗಳ ಬಗ್ಗೆ ಅಧ್ಯಯನ ನಡೆಸಿರುವುದಿಲ್ಲ.